


ಎಡದಿಂದ ಬಲಕ್ಕೆ:

1. ಪ್ರತಿ ಶತಕ ಮುಗಿದಾಗಲೂ ನೂರು ಹೆಜ್ಜೆ (4)
3. ವೇಳೆಗೆ ಸರಿಯಾಗಿ ಬರಲಿಲ್ಲ ; ತುಂಬ ತಡ ಹೌದಲ್ಲ ? (3)
4. ಮುರುಡೇಶ್ವರದ ಸುತ್ತಮುತ್ತ ಕ್ಷಾಮದ ಜೊತೆಗಾರ (3)
6. ಕರ್ತಾರನದೇ ಸೃಷ್ಟಿ – ಹೀಗೆಂದರೂ ಸಾಗರವೇ (4)
7. ಆ ಬೃಹತ್ ಕೊಂಬೆಯನ್ನು ಕಾಪಾಡಿದವ ವಿನಾಯಕ ತಾನೇ ? (3)
9. ಸೋತು ಸೋತು ಸಾಕಾಯಿತು ನಿರಂತರ (3)
11. ಗಣ್ಯರಾದವರ ಕೈಯಲ್ಲಿ ಕತ್ತಿಯಿಂದ ರಕ್ಷಿಸುವ ತಟ್ಟೆ (3)
13. ತಪ್ಪುಗಳನ್ನು ಗಮನಿಸದೆ ಕೆಳಕ್ಕೆ ಬಿದ್ದಾಯಿತು (3)
15. ಸಂಪ್ರದಾಯವನ್ನು ಪಾಲಿಸಲೆಂದು ಈ ಮುಖಾಲಂಕಾರ ವಸ್ತು (4)
17. ಎಂಥ ಸುಂದರ ವರ್ಣನೆ – ಜಲದೇವತೆಯನ್ನು ಕುರಿತದ್ದು (3)
18. ಮೂರೆಣಿಸುವುದರೊಳಗೆ ನೆನಪಿಗೆ ಬರದಂತೆ ಮಾಡು (3)
19. ಮುಹೂರ್ತವನ್ನು ನಿಶ್ಚಯಿಸುವುದರ ಬಗೆಗೆ ಏನು ಈಗಿನ ಸಮಾಚಾರ ?(4)

ಮೇಲಿಂದ ಕೆಳಕ್ಕೆ:

1. ಹೊಸ ಶಹರದಲ್ಲೊಬ್ಬ ಬೇಟೆಗಾರ (3)
2. ದೊಡ್ಡವರನ್ನೂ ಬಿಡುವುದೇನಿಲ್ಲ ಸಿಡುಬಿನಂಥ ಕಾಯಿಲೆ (3)
3. ವ್ಯಾಪಾರವನ್ನು ಕೈ ಬಿಟ್ಟರೆ ಕಾಡೇ ಗತಿ (3)
5. ಜೊತೆಗಾರರೆಲ್ಲರಿಗೂ ತಕ್ಕ ಬಹುಮಾನ ಬೆಳ್ಳಿ (3)
7. ಗಾಬರಿ ಏನಿಲ್ಲ ಬಿಡಿ , ಬರೀ ಅಚ್ಚರಿ (3)
8. ದೃಷ್ಟಿ ಅಂಗದಲ್ಲಿನ ಗುಡ್ಡೆ – ಅಚ್ಚು ಮೆಚ್ಚಿನದು ಕೂಡ (3)
9. ಸ್ವಲ್ಪವೇ ಆದರೂ ಸರಿ, ಸಂತಸದ ಮಾತುಕತೆ ಇರಲಿ (3)
10. ತಾಳವನ್ನು ಗಮನಿಸುವುದರಲ್ಲೇ ಮುಳುಗಿ ಹೋಗಿದ್ದಾನೆ (3)
12. ಇಡೀ ರಾಜ್ಯವನ್ನೇ ಪ್ರಸಿದ್ಧಗೊಳಿಸಿದ್ದು ತಾವರೆ ತಾನೇ ? (3)
14. ತೋರಣ ಕಟ್ಟಿಸು , ತನ್ಮೂಲಕ ತೃಪ್ತಿ ಪಡಿಸು (3)
15. ಪ್ರಾಣಾಯಾಮವನ್ನು ಮಾಡಿದ ನಂತರ ಓಂಕಾರ (3)
16. ಮುನಿದವರನ್ನು ಶಾಂತಗೊಳಿಸಲು ತಕ್ಕ ವಂದನೆ (3)

## 08-10-15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭ್ಯಂಜನ ; 3. ಸಾರಸ; 4. ವರ್ಜಿತ ; 6. ಪರಿಮಳ; 7. ತಡಗುಣಿ ; 9. ತಿಲತೈಲ; 12. ತಳಹದಿ; 14. ಟಿಕಿತ (ತಕಿಟ ಹಿಂದು ಮುಂದು ) 15. ವನಿತೆ ; 16. ರಹದಾರಿ ;

ಮೇಲಿಂದ ಕೆಳಕ್ಕೆ :

1. ಅಸದಳ ; 2. ನವನೀತ ; 3. ಸಾವೇರಿ ; 5. ತರಗು ; 6. ಪಶುಪತಿ 8. ನಿಮನದಿ (ದಿನಮಣಿ ತಲೆಕೆಳಗು); 10. ಲಲಾಟ ; 11. ಲಕ್ಷಾಂತರ 12. ತರಾವರಿ 13. ಹಣತೆ

# ಹಕ್ಕಿ ಸಂಕುಲ- ಏಕೆ ವ್ಯಾಕುಲ?

ಖಗ ಸಂಕುಲ– ಸುಮಾರು ಅರವತ್ತೈದು ಕೋಟಿ ವರ್ಷಗಳಿಂದ ಧರೆಯಲ್ಲಿ ನೆಲೆಸಿರುವ ಪ್ರಾಣಿ ವರ್ಗ ಅದು. ಸಮೀಪ ಹತ್ತು ಸಾವಿರ ಪ್ರಭೇದಗಳಿರುವ ಖಗ ಸಂಕುಲ ಪೃಥ್ವಿಯ ಅತ್ಯಂತ ಯಶಸ್ವೀ ಜೀವಿವರ್ಗಗಳಲ್ಲೊಂದಾಗಿದೆ. ಆದರೆ ಪಕ್ಷಿ ಸಂಕುಲದ ಪ್ರಸ್ತುತ ಸ್ಥಿತಿ ತೀರ ಚಿಂತಾಜನಕ. ದಿನದಿಂದ ದಿನಕ್ಕೆ ಅವುಗಳ ಪ್ರಭೇದ ಸಂಖ್ಯೆ ಮತ್ತು ಪ್ರತಿ ಪ್ರಭೇದದ ಜನಸಂಖ್ಯೆ ಎರಡೂ ಇಳಿಮುಖ. ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಶೇಕಡ ಹತ್ತರಷ್ಟು ಪ್ರಭೇದಗಳು ಇಂದು – ನಾಳೆ ಅಳಿವ ಹಂತದಲ್ಲಿವೆ; ಶೇಕಡ ಅರವತ್ತೈದರಷ್ಟು ಪ್ರಭೇದಗಳು ವಿನಾಶದ ಹಾದಿಯಲ್ಲಿವೆ. ಹಾಗಾಗಿ ಇಡೀ ಖಗ ಸಂಕುಲವೇ ಈಗ ವ್ಯಾಕುಲಗೊಂಡಿದೆ. ವಿಪರ್ಯಾಸ ಏನೆಂದರೆ, ಅದಕ್ಕೆಲ್ಲ ನೇರವಾಗಿ ಅಥವಾ ಪರೋಕ್ಷವಾಗಿ ಮನುಷ್ಯರೇ ಕಾರಣ. ಹಕ್ಕಿ ಸಂಕುಲದ ಅವನತಿಗೆ ಕಾರಣವಾಗಿರುವ ಪ್ರಮುಖ ಮಾನವ ಅಕೃತ್ಯಗಳನ್ನು ನೀವೇ ಗಮನಿಸಿ:

ಆವಾಸ ನಾಶ: ಹಕ್ಕಿಗಳ ವಾಸದ ಅತ್ಯಂತ ಪ್ರಧಾನ ನೆಲೆಗಳಾದ ಮಳೆಕಾಡುಗಳು ಮನುಷ್ಯರ ನಾನಾ ವಿಧ ಆಕ್ರಮಣಗಳಿಂದ ಕ್ಷಿಪ್ರವಾಗಿ ಕುಗ್ಗುತ್ತಿವೆ – ಶೇಕಡ ಐವತ್ತರಷ್ಟು ಖಗ ಪ್ರಭೇದಗಳು ನೆಲೆಸಿರುವುದು ಅಲ್ಲೇ . ಹಕ್ಕಿಗಳ ಇತರ ನೆಲೆಗಳಾದ ಅನ್ಯ ವಿಧ ಅರಣ್ಯಗಳು, ಹುಲ್ಲುಬಯಲು , ಜೌಗುಭೂಮಿ ಇತ್ಯಾದಿಗಳೂ ಮಾನವರ ಅತಿಕ್ರಮಣದಿಂದ ಕುಸಿಯುತ್ತಿವೆ. ಅಷ್ಟೇ ಅಲ್ಲದೆ , ದೂರ ದೂರದ ಏಕಾಂಗಿ ದ್ವೀಪಗಳಿಗೆ ಮನುಷ್ಯರ ಜೊತೆ ಸಾಗಿ ತಲುಪಿರುವ' ಅನ್ಯಪ್ರಾಣಿಗಳು' ಅಲ್ಲಿನ ಸ್ಥಳೀಯ ಹಕ್ಕಿಗಳನ್ನೆಲ್ಲ ಬೇಟೆಯಾಡಿ ತಿಂದು ನಿರ್ನಾಮಗೊಳಿಸುತ್ತಿವೆ.

ವಿಕೃತ ಜಿಹ್ವಾ ಚಾಪಲ್ಯ: ಅಪರೂಪದ ಹಕ್ಕಿಗಳನ್ನು ತಿಂದುಹಾಕುವ ಮನುಷ್ಯರ ವಿಕೃತ ಚಾಪಲ್ಯಕ್ಕೂ ವಿಪರೀತ ಪಕ್ಷಿ ಪ್ರಭೇದಗಳು ಬಲಿಯಾಗುತ್ತಿವೆ. ಅದರಲ್ಲೂ ವಿಶೇಷವಾಗಿ ವಲಸೆಯ ಕಾಲಗಳಲ್ಲಿ ಸಾವಿರಾರು ಕಿಲೋಮೀಟರ್ ದೂರದ ನೆಲೆಗಳಿಂದ ಗುಂಪುಗುಂಪಾಗಿ ಹಾರಿಬರುವ ವಲಸೆಗಾರ ಹಕ್ಕಿಗಳನ್ನು ದಾರಿಗಳಲ್ಲೇ ಬಲೆ ಹಾಕಿ, ಸೆರೆಹಿಡಿದು, ಸಂಗ್ರಹಿಸಿ ಕೊಂದು ತಿನ್ನುವ ಕ್ರೂರ ಚಪಲಕ್ಕೆ ಪ್ರತಿ ವರ್ಷ ಸಾವಿರಾರು ಪ್ರಭೇದಗಳ ನೂರಾರು ಕೋಟಿ ಹಕ್ಕಿಗಳು ಬಲಿಯಾಗುತ್ತ ಅಳಿವ ಹಾದಿ ಹಿಡಿಯುತ್ತಿವೆ. (ಚಿತ್ರ : 2 ,3)




ಸಾಕು ಹಕ್ಕಿ ದಂಧೆ: ಸುಂದರ ಹಕ್ಕಿಗಳನ್ನು ಪಂಜರಗಳಲ್ಲಿ ಕೂಡಿ ಹಾಕಿ ಪ್ರದರ್ಶನಕ್ಕಿಡುವ ಕೆಟ್ಟ , ಕ್ರೂರ ಹವ್ಯಾಸ ಕೂಡ ಅತ್ಯಂತ ಆಕರ್ಷಕವಾದ , ಅಪರೂಪವೂ ಆದ ಹೇರಳ ಹಕ್ಕಿಗಳನ್ನು ಅಲ್ಪ ಸಂಖ್ಯೆಗೆ , ಅಳಿವಿನಂಚಿಗೆ ತಲುಪಿಸುತ್ತಿದೆ. ಕೆಲವಾರು ಶ್ರೀಮಂತರ ಈ ವಿಕೃತ ಹವ್ಯಾಸಕ್ಕೆ ಹಕ್ಕಿಗಳನ್ನು ಒದಗಿಸುವ ಭಾರೀ ಲಾಭದಾಯಕ ದಂಧೆಗೆ ಲಕ್ಷಾಂತರ ಹಕ್ಕಿಗಳು ವ್ಯರ್ಥವಾಗಿ ಜೀವ ತೆರುತ್ತಿವೆ. ಹಾಗಾದ್ದರಿಂದಲೇ ಮಕಾಗಳಂಥ ಗಿಳಿಗಳು , ಸಗ್ಗವಕ್ಕಿಗಳಂಥ ವರ್ಣಮಯ ಪ್ರಣಯದುಡುಗೆಗಳನ್ನು ತೊಡುವ ಪಕ್ಷಿಗಳು (ಚಿತ್ರ 1 ) ವೇಗವಾಗಿ ಕಣ್ಮರೆಯಾಗುತ್ತಿವೆ.

ಪರಿಸರ ಮಾಲಿನ್ಯ: ಕೃಷಿ ಭೂಮಿಗಳಲ್ಲಿ ಬಳಸಲಾಗುತ್ತಿರುವ ಅಪಾರ ಪ್ರಮಾಣದ ಕೀಟನಾಶಕ ವಿಷಗಳು ಹಕ್ಕಿಗಳ ಬದುಕಿಗೆ ತೀವ್ರ ಮುಳುವಾಗಿವೆ. ಅವೇ ಪಾಷಾಣಗಳ ಶೇಷಾಂಶಗಳು ನದಿ , ಸರೋವರ , ಸಾಗರಗಳನ್ನೂ ತಲುಪಿ ಅವೆಲ್ಲ ಜಲಾವಾರಗಳನ್ನು ಆಶ್ರಯಿಸಿರುವ ಹಕ್ಕಿಗಳ ಜೀವ ತೆಗೆಯುತ್ತಿವೆ . ಅಷ್ಟೇ ಅಲ್ಲದೆ ಬಚ್ಚಲ ಹೊಲಸು ಮತ್ತು ಪ್ಲಾಸ್ಟಿಕ್ ಕಸವೂ ಅಗಾಧ ಪ್ರಮಾಣದಲ್ಲಿ ಸೇರ್ಪಡೆಗೊಂಡು ಸರ್ವ ವಿಧ ಜಲ ಹಕ್ಕಿಗಳ ಜೀವನವನ್ನು ಹಾಳುಗೆಡಹುತ್ತಿವೆ. ಇಂಥವೆಲ್ಲ ಕಾರಣಗಳಿಂದ ಇಡೀ ಖಗ ಸಂಕುಲ ಪ್ರಸ್ತುತ ತೀವ್ರ ವ್ಯಾಕುಲಗೊಂಡಿದೆ.

■ ಎನ್. ವಾಸುದೇವ್